ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 06 ಎಸ್‌ಪಿಎಸ್ 01 2017

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:04-01-2018

ಜರೂರು

# ಸುತ್ತೋಲೆ

ವಿಷಯ: ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನೀಯರಿಂಗ್ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯ, ಪೀಠೋಪಕರಣ ಹಾಗೂ ಯಂತ್ರೋಪಕರಣಗಳ ಪಟ್ಟಿಯನ್ನು ನೀಡುವ ಬಗ್ಗೆ

ಉಲ್ಲೇಖ: ಆಯುಕ್ತರು, ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರು ಮಾನ್ಯ ನಿರ್ದೇಶಕರೊಡನೆ ನಡೆಸಿದ ದೂರವಾಣಿ ಸಂಭಾಷಣೆ

********

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖದ ಸಂಭಾಷಣೆಯಲ್ಲಿ ಆಯುಕ್ತರು, ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರು ಮಾನ್ಯ ನಿರ್ದೇಶಕರಿಗೆ ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನೀಯರಿಂಗ್ ಸಂಸ್ಥೆಗಳಿಗೆ ಅಗತ್ಯವಾಗಿ ಬೇಕಾದ ಮೂಲಭೂತ ಸೌಕರ್ಯಗಳು ( ಕಟ್ಟಡ, ವರ್ಕ್‌ಶಾಪ್, ಶೌಚಾಲಯ, ತರಗತಿಕೊಠಡಿಗಳು, ಕುಡಿಯುವ ನೀರು, ವಿದ್ಯಾರ್ಥಿ ನಿಲಯ, ಸಭಾಂಗಣ, ಆಟದ ಮೈದಾನ, ಇತ್ಯಾದಿ) ಪೀಠೋಪಕರಣಗಳು ಹಾಗೂ ಯಂತ್ರೋಪಕರಣಗಳ ಬೇಡಿಕೆ ಪಟ್ಟಿಯನ್ನು ನೀಡಿದಲ್ಲಿ ಸೂಕ್ತ ಅನುದಾನವನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನೀಯರಿಂಗ್ ಸಂಸ್ಥೆಗಳ ಪ್ರಾಚಾರ್ಯರುಗಳು ಅತ್ಯಂತ ಜರೂರಾಗಿ ತಮ್ಮ ಸಂಸ್ಥೆಗಳಿಗೆ ಬೇಕಾದ ಮೂಲಭೂತ ಸೌಕರ್ಯ, ಪೀಠೋಪಕರಣ ಹಾಗೂ ಯಂತ್ರೋಪಕರಣಗಳ ಪಟ್ಟಿಗಳನ್ನು ಅಂದಾಜು ಬೆಲೆಗಳೊಂದಿಗೆ ಪ್ರತ್ಯೇಕವಾಗಿ ತಯಾರಿಸಿ ದಿ:06/01/2017 ಸಂಜೆ 05-00 ರೊಳಗೆ ಹಾರ್ಡ್‌ಕಾಪಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸುವುದು ಹಾಗೂ ಸಾಫ್ಟ್‌ಕಾಪಿಯನ್ನು sps.dte@gmail.comಗೆ ಸಲ್ಲಿಸುವುದು.

ನಿರ್ದೇಶಕರು

**ಪ್ರತಿ:** 1. ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನೀಯರಿಂಗ್ ಸಂಸ್ಥೆಗಳ ಪ್ರಾಚಾರ್ಯರ ಮುಂದಿನ ಸೂಕ್ತ ಕ್ರಮಕ್ಕಾಗಿ
2. ಇ-ಆಡಳಿತ ವಿಭಾಗಕ್ಕೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು